OS No.95/2018 DW-2

**<u>ದಿನಾಂಕ 20.09.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಪಿ ಎಸ್ ಜೆ ವಕೀಲರಿಂದಃ</u>**

ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ. ಅದನ್ನು ನನ್ನ ಸಾಕ್ಷ್ಯಾ ವೆಂದು ಪರಿಗಣಿಸಲು ಕೋರಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಯೂ ವಕೀಲರಿಂದಃ</u>**

ನನಗೆ ವಾದಿಯವರು ಗೊತ್ತಿಲ್ಲ. ಸಾಕ್ಷಿದಾರರಾದ ಗೋಪಾಲಯ್ಯ ಮತ್ತು ಪುಟ್ಟಗಿರಿಗೌಡರವರುಗಳು ಗೊತ್ತು. ವಕೀಲರು ನಿಪಿ-1 ಕರಾರು ಪತ್ರವನ್ನು ತೋರಿಸಿದಾಗ ಸಾಕ್ಷಿಯು ನನ್ನ ಸಹಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-1 ರ ಕರಾರು ಪತ್ರದಲ್ಲಿ ನಿಪಿ-1(ಸಿ) ನನ್ನ ಸಹಿ ಇದೆ ಎಂದರೆ ನಿಜ. ನಿಪಿ-1 ಕರಾರು ಪತ್ರದಲ್ಲಿ ನನ್ನ ಗಂಡನ ಸಹಿ ನಿಪಿ-1(ಬಿ) ಎಂದರೆ ನಿಜ. ನಿಪಿ-1 ಕರಾರು ಪತ್ರದಲ್ಲಿ ಸಾಕ್ಷಿದಾರರ ಸಹಿಗಳನ್ನು ಕೇಳಿದಾಗ ಸಾಕ್ಷಿಯು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ವ್ಯಾಪಾರಕ್ಕೆ ಇಟ್ಟಿರಲಿಲ್ಲ. ನಾನು ಮತ್ತು ನನ್ನ ಗಂಡ ದಾವಾ ಸ್ವತ್ತನ್ನು ವಾಪಾರಕ್ಕೆ ಇಟ್ಟಿದ್ದೆವು ಎಂದರೆ ಸುಳ್ಳು. ನಾನು ವಾದಿಗಳ ಕಡೆಯಿಂದ 3 ಲಕ್ಷ ಮುಂಗಡ ಹಣ ಪಡೆದು, ನಂತರ ಉಳಿಕೆ ಹಣ ಪಡೆದು ಕ್ರಯ ಮಾಡಿಕೊಡುತ್ತೇವೆಂದು ಒಪ್ಪಿ ದ್ದೆವು ಎಂದರೆ ಸುಳ್ಳು. ನಾನು ಬಿಕಾಂ, ಎಲ್ ಎಲ್ ಬಿ ಓದಿರುತ್ತೇನೆ. ನನ್ನ ಗಂಡ 2 ಲಕ್ಷ 90 ಸಾವಿರ ಚೆಕ್ ಮುಖಾಂತರ ಮತ್ತು ನಗದು 10 ಸಾವಿರ ಹಣವನ್ನು ವಾದಿಗಳ ಕಡೆಯಿಂದ ಪಡೆದಿದ್ದಾರೆಂದರೆ ಸುಳ್ಳು. ನನ್ನ ಗಂಡನ ಬ್ಯಾಂಕ್ ಖಾತೆಗೆ 2,90,000 ಬಂದಿದೆ ಎಂದರೆ ಸುಳ್ಳು. ನನ್ನ ಗಂಡ ಎಎಸ್ಐ ಆಗಿ ನಿವೃತ್ತಿ ಹೊಂದಿರುತ್ತಾರೆ. ನಿಪಿ-1 ಕರಾರು ಪತ್ರವನ್ನು ಮಾಡಿಕೊಟ್ಟಾಗ ನನ್ನ ಗಂಡ ಪೋಲಿಸಾಗಿದ್ದರು. ನಿಪಿ-1 ಕರಾರು ಪತ್ರಕ್ಕೆ ನನ್ನ ಗಂಡ ಎಲ್ಲಿ ಸಹಿ ಮಾಡಿರುತ್ತಾರೆಂದು ಗೊತ್ತಿಲ್ಲ. ತಕ್ಷಣ ಹಣದ ಅವಶ್ಯಕತೆ ಇದುದ್ದರಿಂದ ನಾವು ದಾವಾ ಆಸ್ತಿಯನ್ನು ವಾದಿಗಳಿಗೆ ಕರಾರು ಮಾಡಿಕೊಟ್ಟಿರುತ್ತೇವೆಂದರೆ ಸುಳ್ಳು. ಸರ್ವೆ ನಕ್ಷೆಗೂ ಸಹ ನಾವು ಸಹಿ ಮಾಡಿಕೊಟ್ಟಿರುತ್ತೇವೆಂದರೆ ಸುಳ್ಳು. ನಾವು ಸರ್ವೆ ನಕ್ಷೆಗೆ ಸಹಿ ಮಾಡಿದ್ದರಿಂದ ಪೋಡಾಗಿದೆ ಎಂದರೆ ಸುಳ್ಳು. ನಾವು ರಾಜಾಜಿನಗರ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನನಗೆ ಇಬ್ಬರು ಹೆಣ್ಣು ಮಕ್ಕಳು. ನನ್ನ

ಮಕ್ಕಳನ್ನು ಕ್ರಯ ಪತ್ರಕ್ಕೆ ಸಹಿ ಮಾಡಿಸುತ್ತೇವೆಂದು ಹೇಳಿದ್ದೆವು ಎಂದರೆ ಸುಳ್ಳು. ದಾವಾ ಆಸ್ತಿಗೆ ಈಗ ಬೆಲೆ ಬಂದಿದೆ. ಈಗ ದಾವಾ ಆಸ್ತಿಗೆ 57 ಲಕ್ಷ ಬೇರೆಯವರು ಖರೀದಿ ಮಾಡಲು ತಯಾರಿದ್ದಾರೆಂದರೆ ಸುಳ್ಳು. ಆದ್ದರಿಂದ ವಾದಿಯವರಿಗೆ ಕ್ರಯ ಮಾಡಿಕೊಡುತ್ತಿಲ್ಲ ಎಂದರೆ ಸುಳ್ಳು. ನನ್ನ ಮತ್ತು ನನ್ನ ಗಂಡನ ಸಹಿ ಸಾಕ್ಷಿದಾರರು ಬಲವಂತವಾಗಿ ಕರಾರು ಪತ್ರಕ್ಕೆ ಸಹಿ ಮಾಡಿಸಿರುತ್ತಾರೆಂದು ಹೇಳುತ್ತಾರೆ. ಈ ಬಲವಂತದ ಬಗ್ಗೆ ದೂರು ಕೊಡಲು ಅರಿವು ಇರಲಿಲ್ಲ. ಕರಾರು ಪತ್ರ ಆಗುವಾಗ ನನ್ನ ಗಂಡ ಪೋಲಿಸ್ ಆಗಿದ್ದರು. ನಾನು ಬಲವಂತದ ಬಗ್ಗೆ ಪೋಲಿಸರಿಗೆ ದೂರು ನೀಡಿಲ್ಲ. ನನ್ನ ಗಂಡನಿಗೂ ಬಲವಂತದ ಬಗ್ಗೆ ದೂರು ಕೊಡಲು ಅರಿವು ಇರಲಿಲ್ಲ.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**